OS 20/2021
**ಪಿಡಬ್ಲ್ಯೂ:1**

**ದಿನಾಂಕ 22.05.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

<u>ಪಾಟೀ ಸವಾಲು </u>: ಪ್ರತಿವಾದಿ ಪರಃ ಶ್ರೀಮತಿ ಕೆ ಎಸ್ ವಕೀಲರಿಂದಃ

ಮೂಲ ದಾವೆ ಸಂಖ್ಯೆ **2/2019** ನ್ನು ಪ್ರತಿವಾದಿಯನ್ನು ಹೊರತುಪಡಿಸಿ ನಾನು ಮತ್ತು ಇತರೆ ಪಕ್ಷಗಾರರು ಜಂಟಿಯಾಗಿ ಸಲ್ಲಿಸಿರುತ್ತೇವೆ. ಸದ್ರಿ ದಾವಾಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಮೂಲ ದಾವೆ ಸಂಖ್ಯೆ **2/201** ರಲ್ಲಿ ದಿ:**15.12.2005** ರ ನನ್ನ ತಂದೆಯ ಮಾಡಿದ ವಿಲುನಾಮೆಯ ಬಗ್ಗೆ ನಮೂದಿಸಿರುತ್ತೇನೆ ಹಾಗೂ ಸದ್ರಿ ದಾವೆಯ ಆದೇಶ ಮತ್ತು ತೀರ್ಪಿನ ಬಗ್ಗೆ ಅನುಭವ ಪಡೆದುಕೊಂಡಿರುತ್ತೇನೆ. ನಿಪಿ-**2** ರ **13** ನೇ ಪುಟದ ಪ್ಯಾರಾ **11** ರ **12, 13, 14** ನೇ ಲೈನ್ ನಲ್ಲಿರುವ ವಿಷಯ ಸರಿ ಇರುತ್ತದೆ. ಮೂಲ ದಾವೆ ಸಂಖ್ಯೆ **2/2019** ರ ವಾದಪತ್ರದಲ್ಲಿ ಬರೆದಿರುವ ವಿಷಯವನ್ನು ಸದ್ರಿ ದಾವೆಯ ತೀರ್ಪಿನಲ್ಲಿ ಕಾಣಿಸಲಾಗಿದೆ ಎಂದರೆ ಸರಿ. ಸದ್ರಿ ತೀರ್ಪಿನ ಪುಟ ಸಂಖ್ಯೆ **7** ಕಂಡಿಕೆ **2** ರಲ್ಲಿ **12** ರಿಂದ **14** ನೇ ಲೈನ್ ನಲ್ಲಿರುವ ವಿಷಯ ಸರಿ ಇಲ್ಲ. ಮೂಲ ದಾವೆ ಸಂಖ್ಯೆ **2/2019** ರಲ್ಲಿ ನಾನು ಸಾಕ್ಷ್ಯ ನುಡಿದಿರುವುದಿಲ್ಲ. ಸದ್ರಿ ದಾವೆಯ ಎಲ್ಲಾ ವ್ಯವಹರಣೆಯನ್ನು ನನ್ನ ಅಣ್ಣನ ಮೂಲಕ ತಿಳಿದುಕೊಂಡಿರುತ್ತೇನೆ. ಸದ್ರಿ ತೀರ್ಪಿನ ವಿಷಯ ಸರಿ ಇಲ್ಲದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದೇನೆ. ಮೇಲ್ಮನವಿ ಸಲ್ಲಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಸಾಕ್ಷಿಯು ಈಗಾಗಲೇ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿ:**02.07.2018** ರಂದು ಪ್ರತಿವಾದಿ ದಾವಾ ಅನುಸೂಚಿ ಆಸ್ತಿಯನ್ನು ಅತಿಕ್ರಮಾಣ ಮಾಡಿ ಬೇಲಿ

ಹಾಕಿದ್ದಾರೆ ಎಂದು  ಮೂಲ ದಾವೆ ಸಂಖ್ಯೆ 2/2019 ರಲ್ಲಿ ತಿಳಿಸಿರುವುದಿಲ್ಲ.  ಅದೇ ರೀತಿ ದಾವಾ ಎ ಅನುಸೂಚಿ ಅಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎಂದು  ಮೂಲ ದಾವೆ ಸಂಖ್ಯೆ 2/2019 ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಮೂಲ ದಾವೆ ಸಂಖ್ಯೆ 2/2019 ನ್ನು ದಾಖಲು ಮಾಡುವಾಗ ದಾವಾ ಆಸ್ತಿ ಮತ್ತು ನನ್ನ ತಂದೆಯ ಇತರ ಆಸ್ತಿಗಳ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನನ್ನ ತಂದೆಯ ಎಲ್ಲಾ ವಾರಸುದಾರರ ಜಂಟಿ ಹೆಸರಿನಲ್ಲಿ ಇತ್ತು.  ನಿಪಿ-1 ದಾಖಲೆ 2020 ರಲ್ಲಿ ಬದಲಾವಣೆ ಆಗಿರುತ್ತದೆ. ನಿಪಿ-10 ದಾಖಲೆಯು ನಿಪಿ-1 ದಾಖಲೆ ಆಗುವ ಪೂರ್ವದಲ್ಲಿ ಆಗಿರುತ್ತದೆ.  ನಿಪಿ-10 ರಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ. ಸಾಕ್ಷಿಯು ಮುಂದುವರಿದು ನ್ಯಾಯಾಲಯದ ಆದೇಶದಂತೆ ಜಾಗವನ್ನು ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಜಾಗದ ಅಳತೆ ಮಾಡುವಾಗ ಮೂಲ ದಾವೆ ಸಂಖ್ಯೆ 2/2019 ಎಲ್ಲಾ ಪಕ್ಷಗಾರರಿಗೆ ನೋಟಿಸು ಮಾಡಿರುವುದಿಲ್ಲ. ಸಾಕ್ಷಿ ಮುಂದುವರಿದು ಎಲ್ಲರಿಗೂ ಸರ್ವೆಯರ್ ಫೋನ್ ಮಾಡಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.  ಯಾವ ಸರ್ವೆಯರ್ ಎಂದು ಹೆಸರು ನೆನಪಿಲ್ಲ.

ನನ್ನ ಸಹೋದರ ವಾಸುದೇವ ನಾಯಕ್ ದಾವಾ ಆಸ್ತಿಯ ಹತ್ತಿರದಲ್ಲಿ ವಾಸವಾಗಿದ್ದಾರೆ.  ಸರ್ವೆಯರ್ ಸ್ಥಳಕ್ಕೆ ಬಂದ ನಂತರದಲ್ಲಿ ನನ್ನ ಸಮಕ್ಷಮಯದಲ್ಲಿ ವಾಸುದೇವ ನಾಯಕ್ ರವರಿಗೆ ನೋಟಿಸು ನೀಡಿರುವುದಿಲ್ಲ ಮತ್ತು ಸರ್ವೆಯರ್ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಹೋದರಿಯರಾದ ಸಂಜೀವಿ, ವಿನೋದ, ಜಯಂತಿ, ಪ್ರೇಮಾ ರವರು ಸರ್ವೆಯರ್ ಸ್ಥಳಕ್ಕೆ ಬಂದಾಗ ಸ್ಥಳದಲ್ಲಿ ಹಾಜರಿರಲಿಲ್ಲ, ಸಹೋದರ ಮನೆಯಲ್ಲಿ ಇದ್ದರು.  ನಿಪಿ-10 ರಲ್ಲಿ ಕಾಣುವ ಸಹಿಗಳು ಸಹೋದರಿಯರು ಬಂದು ಮಾಡಿದ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-10 ನಕಾಶೆ ಆಗಿದೆ ಎಂದು ಹೇಳುವ ಸಮಯದಲ್ಲಿ ದಾವಾ ಆಸ್ತಿ ಮತ್ತು ತಂದೆಯ ಇತರ ಆಸ್ತಿಗಳು ಎಲ್ಲಾ ವಾರಸುದಾರರ ಜಂಟಿ ಹೆಸರಿನಲ್ಲಿ ಇತ್ತು ಎಂದರೆ ಸರಿ.  ನಿಪಿ-1 ಆದ ನಂತರ ದಾವ ಎ ಅನುಸೂಚಿ ಅಸ್ತಿಯ ನಕ್ಷೆ ಮಾಡಲು ಅರ್ಜಿ

ಕೊಟ್ಟಿರುತ್ತೇನೆ. ಯಾವ ವರ್ಷದಲ್ಲಿ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ನಿಪಿ-1 ಆದ ನಂತರ ದಾವಾ ಆಸ್ತಿಯನ್ನು ಆಳತೆ ಮಾಡಲು ಅರ್ಜಿಯನ್ನು ಕೊಟ್ಟಿರುವುದಿಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ಅಳತೆ ಮಾಡಲು ಬಿಟ್ಟಿರುವುದಿಲ್ಲ. ನಿಪಿ-4 ನ್ನು ನಾನು ಪ್ರಥಮ ಬಾರಿಗೆ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ದಿಃ **19.01.2021** ರಂದು ನಿಪಿ-6 ರಂತೆ ಮತ್ತೊಂದು ದೂರು ನೀಡಿರುತ್ತೇನೆ ಆ ರೀತಿ ದೂರು ನೀಡುವ ಪೂರ್ವದಲ್ಲಿ ನಿಪಿ-4 ರ ನಂತರ ಮತ್ತು ನಿಪಿ-7 ರ ಮಧ್ಯದಲ್ಲಿ ದಾವಾ ಎ ಅನುಸೂಚಿ ಆಸ್ತಿಯನ್ನು 8 ಸೆಂಟ್ಸ್ ನ್ನು ಅಳತೆ ಮಾಡಿ ನಕ್ಷೆ ಮಾಡಲು ಅರ್ಜಿ ಕೊಟ್ಟಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ಪಹಣಿ ಪತ್ರಿಕೆ ಜಂಟಿ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಎ ಅನುಸೂಚಿ ಆಸ್ತಿಯ ಉತ್ತರದಲ್ಲಿ ಪ್ರತಿವಾದಿಗೆ ಸೇರಿದ ಜಾಗ. ದಕ್ಷಿಣದಲ್ಲಿ ನನ್ನ ಹಕ್ಕಿನ ಬೇರೆ ಜಾಗ. ಪೂರ್ವ ದಲ್ಲಿ ತ್ರಿಕೋಣಾಕಾರದಲ್ಲಿ ಮತ್ತು ಪಶ್ಚಿಮದಲ್ಲಿ ಸರಕಾರಿ ಜಾಗ ಇದೆ. ವಿಲುನಾಮೆಯಲ್ಲಿ ಕಾಣಿಸಿದ ಎಲ್ಲಾ ಆಸ್ತಿಗಳ ನಕಾಶೆ ನನ್ನ ಬಳಿ ಇದೆಯಾ ಎಂದರೆ ಇದೆ. ಆದರೆ ಅದು ಅಂದಾಜು ನಕ್ಷೆ. ಸದ್ರಿ ಅಂದಾಜು ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಿಪಿ-10 ನ್ನು ಅಂದಾಜು ನಕ್ಷೆಯ ಆಧಾರದಲ್ಲಿ ಸರ್ವೆಯರ್ ಸ್ಥಳಕ್ಕೆ ಬಂದು ಅಳತೆ ಮಾಡಿ ತಯಾರಿಸಿರುತ್ತಾರೆ. ನಿಪಿ-10 ನ್ನು ಅಳತೆ ಮಾಡಿದ ದಿನ ಬೇರೆ ಯಾವೆಲ್ಲ ಆಸ್ತಿಯನ್ನು ಸರ್ವೆ ಮಾಡಿದ್ದಾರೆ ಎಂದರೆ ಯಾವೆಲ್ಲ ಆಸ್ತಿ ವಿಭಾಗವಾಗಬೇಕೋ ಅವುಗಳನ್ನು ಮಾತ್ರ ಅಳತೆ ಮಾಡಿರುತ್ತಾರೆ. ನಿಪಿ-10 ಅಳತೆಯಾಗಿದೆ ಎಂದು ಹೇಳುವ ಸಮಯದಲ್ಲಿ ಇತರ ಯಾವ ಆಸ್ತಿಯನ್ನು ಅಳತೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-10 ನ್ನು ಹೊರತುಪಡಿಸಿ ದಾವಾ ಎ ಅನುಸೂಚಿ ಆಸ್ತಿಯ ಬಗ್ಗೆ ಬೇರೆ ನಕ್ಷೆ ಇರುತ್ತದೆ. ಪ್ಲಾಟಿಂಗ್ ಯಾವ ವರ್ಷದಲ್ಲಿ ಮಾಡಿರುತ್ತಾರೆ ಎಂದು ನೆನಪಿಲ್ಲ. ನ್ಯಾಯಾಲಯದಿಂದ ಮೂಲ ದಾವೆ ಸಂಖ್ಯೆ **2/2019** ರಲ್ಲಿ ನನ್ನ ಹಿಸ್ಸೆಗೆ ವಿಂಗಡಿಸಿದ ಆಸ್ತಿ ಮತ್ತು ಪ್ರತಿವಾದಿಯ ಹಿಸ್ಸೆಗೆ

ವಿಂಗಡಿಸಿದ ಆಸ್ತಿಯನ್ನು ಅಳತೆ ಮಾಡಿಸಲು ಆಕ್ಷೇಪ ಇರುವುದಿಲ್ಲ. ಆದರೆ ಖರ್ಚುನ್ನು ನಾನು ಮತ್ತು ಪ್ರತಿವಾದಿಯು ಸಮಾನವಾಗಿ ಭರಿಸಬೇಕು.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ